# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆ: 1/2020</u>

ಅ.ಸಾ. 07

ದೊ.ಸಾ. 13

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ ಹೆಬ್ಬಳ್ಳಿ |
| ತಂದೆ ಹೆಸರು | : | ಶಿವಪ್ಪ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 10/11/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ:</u>**

ಆರೋಪಿಯನ್ನು ನಮ್ಮ ಊರಿನಲ್ಲಿ ನೋಡಿದ್ದೇನೆ. ನನಗೆ ಅವನ ವಿಶೇಷ ಪರಿಚಯವಿಲ್ಲ. 2018 ರಲ್ಲಿ ಹಂಗರಕಿ ಪಂಚಾಯಿತಿಯ ದಾಖಲೆಗಳು ಸುಟ್ಟ ವಿಷಯ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಿಗೆ ಬೆಂಕಿ ಹಚ್ಚುತ್ತಿರುವ ದೃಶ್ಯವನ್ನು ನಾನು ಚಿತ್ರೀಕರಣ ಮಾಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ಸಾಕ್ಷಿದಾರನಾಗಿದ್ದು ಮುಖ್ಯವಿಚಾರಣೆಯಲ್ಲಿ ನಿರಾಕರಿಸಿದ ಕಾರಣ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದ:</u>**

2. ದಿ: 15/02/2018 ರಂದು ನಾನು ಹಂಗರಕಿ ಪಂಚಾಯಿತಿ ಕಚೇರಿಯ ಮುಂದೆ ಹಾಯ್ದುಹೋಗುತ್ತಿದ್ದೆ ಹಾಗೂ ಆ ಸಮಯದಲ್ಲಿ ಆರೋಪಿ ಕಂಪೌಂಡ್ ಹಾರಿ ಪಂಚಾಯಿತಿಯ ಕಚೇರಿಯ ಒಳಗೆ ನುಗ್ಗಿ, ಫೈಲ್‌ಗಳನ್ನು ಹೊರಗೆ ತಂದು ಬೆಂಕಿ ಹಚ್ಚಿದ ಅನ್ನುವುದು ಸರಿಯಲ್ಲ. ನಾನು ಅದನ್ನು ನೋಡಿ ನನ್ನ ಮೊಬೈಲ್ ಫೋನಿನಿಂದ ಸದರಿ ದೃಶ್ಯಗಳನ್ನು ಚಿತ್ರೀಕರಿಸಿದ್ದೇನೆ

ಹಾಗೂ ಚಿತ್ರೀಕರಿಸಿದ ವಿಷಯವನ್ನು ಪಿಡಿಓ ರವರಿಗೆ ಹೇಳಿದ್ದೇನೆ ಅನ್ನುವುದು ಸರಿಯಲ್ಲ. ಪಿಡಿಓ.ರವರು ನನ್ನ ಮೊಬೈಲ್ ಫೋನಿನ ಸದರಿ ಚಿತ್ರೀಕರಣದ ಭಾಗವನ್ನು ತೆಗೆದುಕೊಂಡು ಸಿಡಿ.. ಮಾಡಿದರು ಅನ್ನುವುದು ಸರಿಯಲ್ಲ. ನನ್ನ ಪೊಲೀಸರು ಸಾಕ್ಷಿಯೆಂದು ವಿಚಾರಣೆ ಮಾಡಿದ್ದಾರೆ , ಆ ಸಮಯದಲ್ಲಿ ಈಗ ನನಗೆ ಓದಿ ಹೇಳಿದಂತೆ ನಿಪಿ.8 ರಂತೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿ ನಮ್ಮ ಗ್ರಾಮನವನಾದ ಕಾರಣ ಅವನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

3. ಇಲ್ಲವೆಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

10/11/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.